# ಮದುಮಗ ಪೆಲೆ

ಫುಟ್‌ಬಾಲ್‌ನಲ್ಲಿ ಹ್ಯಾಟ್ರಿಕ್ ಗೋಲಿಗೆ ಬಹಳ ಮಹತ್ವವಿದೆ. ಒಂದೇ ಪಂದ್ಯದಲ್ಲಿ ಒಬ್ಬನೇ ಆಟಗಾರ ಮೂರು ಗೋಲುಗಳನ್ನು ಹೊಡೆಯುವುದು ಸುಲಭವಲ್ಲ. ಈವರೆಗೆ ನಡೆದಿರುವ 19 ವಿಶ್ವಕಪ್ ಟೂರ್ನಿಗಳ ಒಟ್ಟು 700 ಪಂದ್ಯಗಳಲ್ಲಿ ಕೇವಲ 50 ಹ್ಯಾಟ್ರಿಕ್ ಗೋಲುಗಳು ಮಾತ್ರ ದಾಖಲಾಗಿವೆ. ಈ 50ರಲ್ಲೂ ಇಡೀ ಜಗತ್ತೇ ನೆನಪಿಟ್ಟುಕೊಂಡಿರುವ ಹ್ಯಾಟ್ರಿಕ್ ಗೋಲು ಎಂದರೆ ಪೆಲೆ ಅವರದ್ದು. ಏಕೆಂದರೆ ಆ ಹ್ಯಾಟ್ರಿಕ್ ಗೋಲು ಹೊಡೆದಾಗ ಪೆಲೆಗೆ ಇನ್ನೂ 17 ವರ್ಷ 244 ದಿನಗಳ ವಯಸ್ಸು! ವಿಶ್ವಕಪ್ ಫುಟ್‌ಬಾಲ್ ಇತಿಹಾಸದಲ್ಲೇ ಇಷ್ಟು ಚಿಕ್ಕ ವಯಸ್ಸಿನಲ್ಲಿ ಹ್ಯಾಟ್ರಿಕ್ ಹೊಡೆದ ಏಕೈಕ ಆಟಗಾರ ಪೆಲೆ. ಹಾಗೆ ನೋಡಿದರೆ ಇಡೀ ಜಗತ್ತಿನಲ್ಲೇ ಮೊದಲ ದರ್ಜೆ ಪಂದ್ಯವೊಂದರಲ್ಲಿ ಗೋಲು ಹೊಡೆದ ಅತ್ಯಂತ ಕಿರಿಯ ಆಟಗಾರನೂ ಪೆಲೆಯೇ. ಆಟವಾಡಿದ ಮೊದಲ ಅಂತರರಾಷ್ಟ್ರೀಯ ಪಂದ್ಯದಲ್ಲೇ ಅರ್ಜೆಂಟೀನಾ ವಿರುದ್ಧ ಪೆಲೆ ಗಳಿಸಿದ ಮೊದಲ ಗೋಲದು. ಆಗ ಪೆಲೆ ವಯಸ್ಸು ಕೇವಲ 16 ವರ್ಷ!

ಜಗತ್ತಿನ 'ಫುಟ್‌ಬಾಲ್ ಕಿಂಗ್' ಎಂದೇ ಹೆಸರು ಪಡೆದಿರುವ 'ಕಪ್ಪು ಮುತ್ತು' ಪೆಲೆ ಅವರಿಗೀಗ 75ರ ಇಳಿಹರೆಯ. ಇದೀಗ ನಿಜಜೀವನದಲ್ಲೂ ಪೆಲೆ ಹ್ಯಾಟ್ರಿಕ್ ಹೊಡೆದ ಸುದ್ದಿ ಬಂದಿದೆ. ಈಗಾಗಲೆ ಇಬ್ಬರು ಪತ್ನಿಯರಿಗೆ ಡೈವೋರ್ಸ್ ಕೊಟ್ಟಿರುವ ಪೆಲೆ, ಕಳೆದ ವಾರ (ಬರ್ತ್‌ಡೇ 21–10–1940) ತಮ್ಮ ಮೂರನೇ (ಹ್ಯಾಟ್ರಿಕ್) ಮದುವೆಯನ್ನು ದಾಖಲಿಸಿದರು. ಎಡ್ಸನ್ ಅರಾಂಟೆಸ್ ಡು ನಶಿಮೀಂಟೊ (ಇದು ಪೆಲೆ ಅವರ ನಿಜ ನಾಮಧೇಯ!) ಅವರ ಈ ಮೂರನೇ ಮದುವೆ ಮಾಧ್ಯಮಗಳಿಗೆ ದೊಡ್ಡ ಸುದ್ದಿ. ಮದುಮಗಳ ಹೆಸರು ಮರ್ಸಿಯಾ ಅವೋಕಿ, ವಯಸ್ಸು 41. ಆಕೆಯೂ ಡೈವೋರ್ಸಿ.

ಪೆಲೆಗೆ ಮರ್ಸಿಯಾಳ ಪರಿಚಯ ಆದದ್ದೂ ಒಂದು ಸ್ವಾರಸ್ಯಕರ ವಿಷಯವೇ. 80ರ ದಶಕದಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಮರ್ಸಿಯಾಳ ಮದುವೆಗೆ ಪೆಲೆ ಹೋಗಿದ್ದರು. ಅದೇ ಅವರ ಮೊದಲ ಭೇಟಿ. ಆ ಬಳಿಕ ಎರಡನೇ ಭೇಟಿಯಾದದ್ದು 2008ರಲ್ಲಿ ನ್ಯೂಯಾರ್ಕ್‌ನಲ್ಲಿ ದೊಡ್ಡ ಕಟ್ಟಡವೊಂದರ ಎಲವೇಟರ್‌ನಲ್ಲಿ. ಆ ಭೇಟಿಯ ವೇಳೆ ಆಕೆಯೂ ಬ್ರೆಜಿಲ್‌ನ ಸಾವೊಪೋಲೊದಾಕೆ ಎನ್ನುವುದು ಗೊತ್ತಾಯಿತು. ಜತೆಗೆ ಆಕೆಗೆ ಗಂಡನ ಜತೆಗೆ ಸಾಂಸಾರಿಕ ಬಿಕ್ಕಟ್ಟು ಉಂಟಾಗಿದೆಯೆಂದೂ ತಿಳಿಯಿತು. ಇವರಿಬ್ಬರ ಮೂರನೇ ಭೇಟಿ ಎರಡು ವರ್ಷಗಳ ಬಳಿಕ ಮತ್ತೆ ಇನ್ನೊಂದು ಬೃಹತ್ ಕಟ್ಟಡದ ಎಲವೇಟರ್‌ನಲ್ಲೇ ನಡೆಯಿತು. ಆ ವೇಳೆಗೆ ಮರ್ಸಿಯಾಳ ಡೈವೋರ್ಸ್ ಆಗಿತ್ತು. ಪೆಲೆ ಕೂಡಾ ಎರಡನೇ ಹೆಂಡತಿಗೆ ವಿಚ್ಛೇದನ ನೀಡಿದ್ದರು. ಮಾತನಾಡಿದಾಗ ಇಬ್ಬರೂ ಅದೇ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದಾರೆ ಎನ್ನುವುದು ತಿಳಿಯಿತು! 'ನನ್ನ ಮನೆ ರಿಪೇರಿ ಮಾಡಿಸಿದ್ದೇನೆ, ಬನ್ನಿ ನೋಡಿ' ಎಂದು ಮರ್ಸಿಯಾ ಕರೆದಳು. ಆ ನಂತರದ್ದು ಇತಿಹಾಸ– ಮರ್ಸಿಯಾಳು ಪೆಲೆ ಗರ್ಲ್‌ಫ್ರೆಂಡ್ ಆಗಿ ಎಲ್ಲೆಡೆ ಜತೆಗೆ ಕಾಣಿಸಿಕೊಂಡಳು. ಆರು ವರ್ಷಗಳ ಒಡನಾಟದ ಬಳಿಕ ಈಗ ಆಕೆ ಬಾಳಗೆಳತಿ.

ಹಾಗೆಂದು ಪೆಲೆ ಹುಡುಗಿಯರ ವಿಷಯದಲ್ಲಿ ಸರ್ವಗುಣ ಸಂಪನ್ನರೇನಲ್ಲ. 1966ರಲ್ಲಿ ರೋಸ್‌ಮೇರಿಯನ್ನು ಮೊದಲ ಮದುವೆಯಾದಾಗಲೇ ಪೆಲೆ ಸ್ತ್ರೀಲೋಲ ಎಂಬ ಸುದ್ದಿ ಹಬ್ಬಿತ್ತು. ಒಬ್ಬ ಮಗ, ಪ್ರೀತಿಪಾತ್ರ ಪತ್ನಿ ಇದ್ದಂತೆಯೇ ಇನ್ನಿಬ್ಬರು ಹೆಂಗಳೆಯರ ಜತೆಗೆ ಪೆಲೆ ಸಂಬಂಧ ಬೆಳೆಸಿದ್ದಾರೆಂದೂ, ಇಬ್ಬರಲ್ಲೂ ಇಬ್ಬರು ಮಕ್ಕಳು ಹುಟ್ಟಿದ್ದಾರೆಂದೂ ಗುಲ್ಲೆದ್ದಿತ್ತು. ಈ ಪ್ರೇಯಸಿಯರ ಪೈಕಿ ಒಬ್ಬಾಕೆ ಅವರ ಮನೆಕೆಲಸದಾಕೆ ಅನಿಸಿಯ ಮಚಾದೊ ಎಂದೂ ಗೊತ್ತಾಗಿತ್ತು. ಈ ವಿಷಯಕ್ಕೇ 12 ವರ್ಷಗಳ ಸಂಸಾರ ಬಿರುಕು ಬಿಟ್ಟು ಕೊನೆಗೆ ಡೈವೋರ್ಸ್‌ನಲ್ಲಿ ಕೊನೆಗೊಂಡಿತ್ತು.

ಆ ವೇಳೆಗೆ ಬ್ರೆಜಿಲ್‌ನ ಖ್ಯಾತ ಗಾಯಕಿ ಕ್ಸುಕ್ಸಾ, ಪೆಲೆ ಗೆಳತಿಯಾದಳು. ಇಬ್ಬರೂ 5 ವರ್ಷಗಳ ಕಾಲ ಡೇಟಿಂಗ್ ನಡೆಸಿ ಬಳಿಕ ಬೇರೆಯಾದರು. 1989ರಲ್ಲಿ ಬ್ರೆಜಿಲ್‌ನ ಸುರಸುಂದರಿ 'ಮಿಸ್ ಬ್ರೆಜಿಲ್' ಫ್ಲೇವಿಯಾ ಕವಲ್‌ಕರಿಟಿ ಜತೆ ಪೆಲೆ ಸಂಬಂಧ ಬೆಳೆಸಿದರು. ಈ ಸಂಬಂಧ 1996ರವರೆಗೂ ಮುಂದುವರಿಯಿತು. 96ರಲ್ಲಿ ಪೆಲೆ ಎರಡನೇ ಪತ್ನಿಯಾಗಿ ಬಂದಾಕೆ ಅಸ್ಸಿರಿಯಾ ಲೆಮಸ್ ಸೀಕ್ಸಸ್. 14 ವರ್ಷಗಳ ಸಂಸಾರದಲ್ಲಿ ಅವಳಿ ಜವಳಿ ಮಕ್ಕಳಾದರು. ಆಗ ಪೆಲೆ ಅವರು ಬ್ರೆಜಿಲ್‌ನ ಕ್ರೀಡಾ ಸಚಿವರೂ ಆಗಿದ್ದರು. ಆದರೆ 2008ರಲ್ಲಿ ಎರಡನೇ ಮದುವೆಯೂ ಮುರಿದುಬಿತ್ತು.

ವೈಯಕ್ತಿಕ ಜೀವನದ ವಿವಾದಗಳು ಏನೇ ಇರಲಿ; ಫುಟ್‌ಬಾಲ್ ಮೈದಾನದಲ್ಲಿ ಮಾತ್ರ ಪೆಲೆ ಜಗತ್ತು ಕಂಡ ಅತ್ಯದ್ಭುತ. ಮೊದಲ ದರ್ಜೆಯ ಲೀಗ್ ಪಂದ್ಯಗಳಲ್ಲಿ ಒಟ್ಟು 541 ಗೋಲುಗಳನ್ನು ಹೊಡೆದ ವಿಶ್ವದಾಖಲೆಯನ್ನು ಈವರೆಗೆ ಯಾರೂ ಮುರಿಯಲಾಗಿಲ್ಲ. ಒಟ್ಟು 1363 ಪಂದ್ಯಗಳಲ್ಲಿ 1281 ಗೋಲು ಗಳಿಸಿರುವುದೂ ವಿಶ್ವದಾಖಲೆಯೇ. ಬ್ರೆಜಿಲ್ ತಂಡದ ನಾಯಕನಾಗಿ 1958, 1962 ಮತ್ತು 1970ರಲ್ಲಿ ಮೂರು ಬಾರಿ ಬ್ರೆಜಿಲ್‌ಗೆ ವಿಶ್ವಕಪ್ ತಂದುಕೊಟ್ಟ ಕೀರ್ತಿ ಪೆಲೆಯದ್ದು. ಬಡಕುಟುಂಬದಲ್ಲಿ ಹುಟ್ಟಿ ಬಾಲ್ಯದಲ್ಲಿ ಚಾದಂಗಡಿಯಲ್ಲಿ ಕೆಲಸ ಮಾಡುತ್ತಾ ಅಪ್ಪನಿಂದ ಫುಟ್‌ಬಾಲ್ ಕಲಿತ ಹುಡುಗ ಪೆಲೆ, ಎತ್ತರಕ್ಕೆ ಬೆಳೆದು ನಿಂತು 'ಬ್ರೆಜಿಲ್‌ನ ಆಸ್ತಿ' ಎಂದು ದೇಶದ ಅಧ್ಯಕ್ಷರಿಂದಲೇ ಘೋಷಣೆ ಮಾಡಲ್ಪಟ್ಟಾತ. 1999ರಲ್ಲಿ ವಿಶ್ವದ 'ಶತಮಾನದ ಆಟಗಾರ' ಎಂಬ ಬಿರುದನ್ನು ಮೂರು ಸಂಸ್ಥೆಗಳಿಂದ ಪಡೆದದ್ದು ಅತಿದೊಡ್ಡ ಸಾಧನೆ. ಹ್ಯಾಟ್ರಿಕ್ ಮದುವೆಗೆ ಶುಭವಾಗಲಿ.



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65